ರೂಪಾಯಿ ಮಾಡುವುದು ಅಗತ್ಯ ತುರ್ತು ಘೋಷಣೆ ನೀಡುವುದು ಅಗತ್ಯವಾದುದರಿಂದ ಈ ಸಮಸ್ಯೆಯನ್ನು ಸದನದಲ್ಲಿ ತರಲು ಇಚ್ಚಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಈ ಸೂಚನೆ ಗಮನಾರ್ಹವಾದುದು. ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡುತ್ತಿದೆ.

ಶ್ರೀ ಪಂಪಾಪತಿ.—ಇಷ್ಟು ಹೇಳಿದರೆ ತೃಪ್ತಿಯಾಯಿತೇ ?

ಅಧ್ಯಕ್ಷರು.—ಈ ೩೫೦ ರ ನಿಯಮ ಮೇರೆಗೆ ಮಾತನಾಡಲಿಕ್ಕೆ ಬರುವುದಿಲ್ಲ. ಮಾನ್ಯ ಕೃಷ್ಣನ್ ರವರೇ, ನೀವು ಅವರಿಗೆ ಹೇಳಿರಿ.

ಶ್ರೀ ಪಂಪಾಪತಿ:—ಇದರ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ.

ಅಧ್ಯಕ್ಷರು.—ಹಾಗೆ ಮಾತನಾಡಿದರೆ ಅದೆಲ್ಲಾ ಕಡತಕ್ಕೆ ಬರುವುದಿಲ್ಲ.

ಶ್ರೀ ಪಂಪಾಪತಿ.—ಅದು ಕಡತಕ್ಕೆ ಬರದೇ ಇದ್ದರೂ ಚಿಂತೆ ಇಲ್ಲ.

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ, ನೀವು ಪಾರ್ಟಿ ಲೀಡರ್ ಅವರಿಗೆ ಹೇಳಿರಿ. ಈಗ ಪ್ರತಾಪ ಚಂದ್ರಶೆಟ್ಟಿಯವನ್ನು ಕರೆಯಂಠ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಅವರು ಮತ್ತೆ ಮಾತನಾಡುವುದಕ್ಕೆ ಶುರಮಾಡಿದ್ದಾರೆ. ಹೇಳಿರಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ,...

ಅಧ್ಯಕ್ಷರು.—ನೀವು ಅವರಿಗೆ ಗೈಡ್ ಮಾಡಿರಿ ಎಂದರೆ, ನೀವೂ ಸಹ ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡುತ್ತೀರಿ. ಇದರ ಮೇಲೆ ಮಾತನಾಡುವುದಕ್ಕೆ ಬರುವುದಿಲ್ಲ ಎಂದು ಅವರಿಗೆ ಹೇಳಿರಿ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೀಗೆ ಹೇಳಿದರೆ ಹೇಗೆ ?

ಅಧ್ಯಕ್ಷರು.—ಇದರ ಮೇಲೆ ಮಾತನಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿರಿ. ಈಗ ಪ್ರತಾಪ ಚಂದ್ರಶೆಟ್ಟಿಯವರು ಮಾತನಾಡಲಿ.

(೪) ಕುಂದಾಪುರ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ತೋಡಿಸಿದ ೧೧ ಬಾವಿಗಳಿಗೆ ಹಣ ಪಾವತಿ ಮಾಡದಿರುವುದು

ಶ್ರೀ ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಕಡಿಯಂವ ನೀರಿನ ಯೋಜನೆಯನ್ವಯ ಕುಂದಾಪುರ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಮುಖಾಂತರ ೧೧ ಬಾವಿಗಳನ್ನು ತೋಡಿದ್ದರೂ ಹಣ ಪಾವತಿಯಾಗದಿರುವಬಗ್ಗೆ ಹೇಳುತ್ತೇನೆ. ಸರ್ಕಾರದ ಯೋಜನೆಯನ್ವಯ ಕುಂದಾಪುರ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಮುಖಾಂತರ ಒಳ್ತೂರು ಹೊಸಂಗದಿ, ಸಳ್ವಾಡಿ, ಹೊಸಾಡು ಮಂಡ್ಕೆ ಗೋವಾಡಿ ಹೆಂಗವಳ್ಳಿ ಕುಂದಾಪುರ, ಬೀಜಾಡಿ, ಬೆಳ್ಚೆ, ಅಂದಾರು ಹೀಗೆ ೧೧ ಬಾವಿಗಳು ಮಂಜೂರಾಗಿದ್ದು ಕೆಲವು ಬಾವಿಗಳನ್ನು ಸಂಪೂರ್ಣ ತೋಡಿದ್ದು ಕೆಲವು ಮುಗಿಸುವ ಹಂತದಲ್ಲಿದ್ದರೂ ಸಹ ಈತನಕ ಹಣ ಪಾವತಿಯಾಗದೆ ಇರುವುದರಿಂದ ಸಾರ್ವಜನಿಕರ ಉಪಯೋಗಕ್ಕೆ ಆ ಬಾವಿಗಳನ್ನು ಬಿಟ್ಟುಕೊಡದೇ ಇರುವುದರಿಂದ ಹಾಗೂ ಕೆಲವು ಬಾವಿಗಳು ಸಂಪೂರ್ಣವಾಗದೇ ಇರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಅನಾನುಕೂಲ ಉಂಟಾಗಿದೆ. ಆದ್ದರಿಂದ ಅಗತ್ಯವಿದ್ದ ಹಣವನ್ನು ಬಿಡುಗಡೆ ಮಾಡಿ ಕುಡಿಯುವ ನೀರಿನ ಬಾವಿಗಳನ್ನು ಸಂಪೂರ್ಣಗೊಳಿಸಿ ಜನತೆಗಾಗುವ ಅನಾನುಕೂಲತೆಯನ್ನು ಸರಿಪಡಿಸಬೇಕಾಗಿ ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಡಿ. ಬಿ. ಇನಾಂದಾರ್ (ಆರೋಗ್ಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂಥಾ ವಿಷಯದಲ್ಲಿ ಏನು ತೊಂದರೆ ಇದೆ ಅದನ್ನು ನಿವಾರಣೆ ಮಾಡಲಿಕ್ಕೆ ಸರ್ಕಾರ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಳ್ಳುತ್ತದೆ ಎಂದು ಹೇಳಂತ್ತೇನೆ.